# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್\ಉಪಲೋಕ್\ಬಿಡಿ\2549\2014\ಸನಿಕಾಸ–2

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 4.10.2016

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(3)ರ ಅನ್ವಯ ವರದಿ

ವಿಷಯ: ಸರ್ಕಾರಿ ನೌಕರರಾದ ಶ್ರೀ.ಟಿ.ವಿ.ಅರುಣ್ ಕುಮಾರ್, ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯ್ತಿ, ಹೊಸಕೋಟೆ ಮತ್ತು (2) ಶ್ರೀಮತಿ.ಬಿ.ಇ.ಶಂಕರಮ್ಮ, ಪಂಚಾಯ್ತಿ ಅಭಿವೃದ್ಧಿ ಅಧಿಕಾರಿ, ಕುಂಬಳಹಳ್ಳಿ ಗ್ರಾಮ ಪಂಚಾಯ್ತಿ, ಹೊಸಕೋಟೆ ತಾಲ್ಲೂಕು ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರು ಕರ್ತವ್ಯ ಲೋಪ/ ದುರ್ವರ್ತನೆ ಎಸಗಿರುವ ಬಗ್ಗೆ.

*******

ಶ್ರೀ.ಕೃಷ್ಣ ಮೂರ್ತಿ, ಬಿನ್ ಲೇಟ್ ಮುನೇಗೌಡ, ಕಲ್ಲಹಳ್ಳಿ ಗ್ರಾಮ, ಕಸಬಹೋಬಳಿ, ಕುಂಬಳಹಳ್ಳಿ ಅಂಚೆ, ಹೋಸಕೋಟೆ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ ಶ್ರೀ.ಟಿ.ವಿ.ಅರುಣ್ ಕುಮಾರ್, ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯ್ತಿ, ಹೊಸಕೋಟೆ ಮತ್ತು (2) ಶ್ರೀಮತಿ.ಬಿ.ಇ.ಶಂಕರಮ್ಮ, ಪಂಚಾಯ್ತಿ ಅಭಿವೃದ್ಧಿ ಅಧಿಕಾರಿ, ಕುಂಬಳಹಳ್ಳಿ ಗ್ರಾಮ ಪಂಚಾಯ್ತಿ, ಹೊಸಕೋಟೆ ತಾಲ್ಲೂಕು ಬೆಂಗಳೂರು ಗ್ರಾಮಾಂತರ ಜಿಲ್ಲೆ (ಇನ್ನು ಮುಂದೆ ಎದುರುದಾರ ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ಅವ್ಯವಹಾರದ ಬಗ್ಗೆ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಂಡಿದ್ದಿದೆ.

2. **<u>ದೂರಿನ ಸಂಕ್ಷಿಪ್ತ ವಿವರಣೆ:–</u>**

ದೂರುದಾರರು ತಮ್ಮ ದೂರಿನಲ್ಲಿ ಹೊಸಕೋಟೆ ತಾಲ್ಲೂಕು ಕಲ್ಲಹಳ್ಳಿ ಗ್ರಾಮದ ಸ. ನಂ; 144/4 ಕ್ಷೇತ್ರ 1ಎ., 4ಗು., ಜಮೀನು ದೂರುದಾರರ ಪಿತ್ರಾರ್ಜಿತ ಜಮೀನಾಗಿರುತ್ತದೆ. ಆದರೆ ಇದೇ ಗ್ರಾಮ ದೊಡ್ಡಬಚ್ಚಣ್ಣ ಮತ್ತು ಮುನೇಗೌಡ ಎಂಬುವವರು ನಕಲಿ ದಾಖಲೆಗಳನ್ನು ಸೃಷ್ಟಿಸಿ ದೂರುದಾರರ ಜಮೀನಿನಲ್ಲಿ

ನಿವೇಶನಗಳನ್ನು ಗುರುತಿಸಿ ಎದುರುದಾರರು ನಕಲಿ ಹಕ್ಕು ಪತ್ರಗಳನ್ನು ಖಾತೆ ನಂ: 201/1, 202/2 ಅಂತ ಮಾಡಿರುತ್ತಾರೆ. ಆ ಆಧಾರದ ಮೇಲೆ ಈ ಇಬ್ಬರು ವ್ಯಕ್ತಿಗಳು ದೂರುದಾರರ ಜಮೀನನ್ನು ಅತಿಕ್ರಮಿಸಲು ಪ್ರಯತ್ನಿಸುತ್ತಿದ್ದಾರೆ. ಆದ್ದರಿಂದ ಎದುರುದಾರರ ವಿರುದ್ಧ ಸೂಕ್ತ ಕ್ರಮ ಕೈಗೊಂಡು ಕಾನೂನು ಬಾಹೀರ ಹಕ್ಕು ಪತ್ರಗಳನ್ನು ರದ್ದುಪಡಿಸು ಆದೇಶಿಸಬೇಕಂದು ದೂರು ಸಲ್ಲಿಸಿದ್ದಾರೆ.

3) ಎದುರುದಾರ ನಂ:1 ರವರು ತಮ್ಮ ಆಕ್ಷೇಪಣೆಯಲ್ಲಿ ಎದುರುದಾರ ನಂ: 2 ರವರು ದೂರುದಾರರ ದೂರಿನ ಮೇರೆಗೆ ದಿ: 9.9.2014ರಂದು ಸ್ಥಳ ಪರಿಶೀಲನೆ ನಡೆಸಿದಾಗ ಸ. ನಂ: 144/4ರ ಜಮೀನು ಯಾವ ಭಾಗದಲ್ಲಿ ಇದೇ ಎಂಬ ಬಗ್ಗೆ ನಿಖರವಾದ ಮಾಹಿತಿ ಸಿಗದ ಕಾರಣ ದೂರುದಾರರು ತಮ್ಮ ಜಮೀನನ್ನು ಮೊಜಣಿ ಮಾಡಿಸಿದರೆ ಅದರಲ್ಲಿ ಅತಿಕ್ರಮಣದ ಬಗ್ಗೆ ತಿಳಿಯಲು ಸಾಧ್ಯವಾಗುತ್ತದೆ ಅಂತ ವರದಿ ನೀಡಿದ್ದರಿಂದ ತಹಶೀಲ್ದಾರ್ ಹೊಸಕೋಟೆ ರವರಿಗೆ ಸೂಕ್ತ ನಿರ್ದೇಶನ ನೀಡಬೇಕೆಂದು ಕೇಳಿದ್ದಾರೆ.

4) ಎದುರುದಾರ ನಂ:2 ರವರು ತಮ್ಮ ಆಕ್ಷೇಪಣೆಯಲ್ಲಿ ದಿ: 9.9.2014ರಂದು ಸ್ಥಳ ಪರಿಶೀಲನೆ ನಡೆಸಿ ಅವರ ವರದಿಯನ್ನು ಎದುರುದಾರ ನಂ:1 ರವರಿಗೆ ಸಲ್ಲಿಸಲಾಗಿದೆ ಅಂತ ತಿಳಿಸಿದ್ದಾರೆ.

5) ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ ಎದುರುದಾರ ನಂ; 2ರವರು ಸ್ಥಳದಲ್ಲಿ ಹಾಜರಾಗಿದ್ದು ಆದರೆ ಯಾವುದೇ ದಾಖಲೆಗಳನ್ನು ಪರಿಶೀಲಿಸಿರುವುದಿಲ್ಲ ಆದ್ದರಿಂದ ಅವರು ದೊಡ್ಡ ಬಚ್ಚಣ್ಣ ಮತ್ತು ಮುನೇಗೌಡರವರೊಂದಿಗೆ ಶಾಮೀಲಾಗಿ ಸುಳ್ಳು ವರದಿಯನ್ನು ನೀಡಿರುತ್ತಾರೆ. ಆದ್ದರಿಂದ ಅದನ್ನು ತಿರಸ್ಕರಿಸಬೇಕೆಂದು ಕೇಳಿಕೊಂಡಿದ್ದಾರೆ.

6. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:

ಅ) " **ದೂರುದಾರರ ಹೆಸರಿನಲ್ಲಿ ಸ. ನಂ: 144/4 ಕ್ಷೇತ್ರ 1ಎ., 4ಗು., ಇರುತ್ತದೆ ಅಂತ ಪಹಣಿ ಪತ್ರಿಕೆಯನ್ನು ಗಮನಿಸಿದಾಗ ಕಂಡುಬರುತ್ತದೆ. ಬಚ್ಚಣ್ಣ ಹಾಗೂ ಮುನೇಗೌಡ ಇವರಿಗೆ 1981 ಆಗಸ್ಟ್ 26ನೇ ತಾರೀಖಿನಂದು ಗ್ರಾಮಠಾಣಾದ ಜಮೀನಿನಲ್ಲಿ ನಿವೇಶನ ನಂ: 1**

ಮತ್ತು 2 ನೀಡಲಾಗಿದೆ ಎನ್ನುವುದು ಇಲ್ಲಿ ಹಾಜರುಪಡಿಸಿದ ಹಕ್ಕು ಪತ್ರಗಳಿಂದ ತಿಳಿಯುತ್ತದೆ. ಕರ ನಿರ್ಧರಣಾ ಪಟ್ಟಿಯಲ್ಲಿ 201/1 ದೊಡ್ಡಬಚ್ಚಣ್ಣನ ಹೆಸರಿನಲ್ಲಿ ಹಾಗೂ 2020/2 ಮುನೇಗೌಡನ ಹೆಸರಿನಲ್ಲಿ ದಾಖಲಾಗಿರುತ್ತದೆ. ಆದರೆ ಈ ಎರಡೂ ನಿವೇಶನಗಳು ದೂರುದಾರರ ಜಮೀನಿನಲ್ಲಿ ಬರುತ್ತದೆ ಹೇಗೆ ಎಂದು ಪರಿಶೀಲಿಸಬೇಕಾಗುತ್ತದೆ.

ಆ) ಎದುರುದಾರ ನಂ:1 ರವರು ಸ್ಥಳ ಪರಿಶೀಲನೆ ನಡೆಸಿ ಮಹಜರ್ ಅನ್ನು ತಯಾರಿಸಿದ್ದು ಆದರೆ ದೂರುದಾರರ ಜಮೀನನ್ನು ಮೊಜಿಣಿ ಮಾಡಿದಾಗ ಮಾತ್ರ ಅವರ ಜಮೀನನ್ನು ಅತಿಕ್ರಮಿಸಿದ್ದು ಕಂಡುಬರುತ್ತದೆ ಅಂತ ಅಭಿಪ್ರಾಯಪಟ್ಟಿರುತ್ತಾರೆ. ಎದುರುದಾರ ನಂ: 2 ರವರು ಸಹ ಇದೇ ವರದಿಯ ಆಧಾರದ ಮೇಲೆ ದೂರುದಾರರು ತಮ್ಮ ಜಮೀನನ್ನು ಅಳತೆ ಮಾಡಿಸಿ ನಕ್ಷೆಯೊಂದಿಗೆ ಚೆಕ್ ಬಂದಿಯನ್ನು ಗುರುತಿಸಿಕೊಟ್ಟಲ್ಲಿ ಮುಂದಿನ ಕ್ರಮ ಕೈಗೊಳ್ಳಲಾಗುವುದು ಅಂತ ತಮ್ಮ ಆಕ್ಷೇಪಣೆಯಲ್ಲಿ ತಿಳಿಸಿದ್ದಾರೆ. ಆದರೆ ಎದುರುದಾರರು ದೊಡ್ಡಬಚ್ಚಣ್ಣ ಮತ್ತು ಮುನೇಗೌಡರಿಗೆ ಹಕ್ಕು ಪತ್ರ ನೀಡಿದ ನಿವೇಶನಗಳು ದೂರುದಾರರ ಜಮೀನಿನಲ್ಲಿ ಬರುತ್ತವೇಯೇ ಹೇಗೆ ಎನ್ನುವ ಬಗ್ಗೆ ಸಂಬಂಧಿತ ಇಲಾಖೆಯಿಂದ ಮೊಜಿಣಿ ಮಾಡಿಸಿ ದೂರುದಾರರಿಗೆ ಪರಿಹಾರ ದೊರಕಿಸಿಕೊಡುವುದು ಅವರ ಕರ್ತವ್ಯವಾಗಿರುತ್ತದೆ. ಆದರೆ ಅದನ್ನು ಮರೆ ಮಾಜಿ ದೂರುದಾರರೇ ಜಮೀನನ್ನು ಮೊಜಿಣಿ ಮಾಡಿಸಿ ನಕ್ಷೆಯೊಂದಿಗೆ ಚೆಕ್ ಬಂದಿ ಗುರುತಿಸಿಕೊಟ್ಟಾಗ ಮಾತ್ರ ಕ್ರಮ ಕೈಗೊಳ್ಳುವುದಾಗಿ ಎದುರುದಾರರು ಆಕ್ಷೇಪಣೆ ಸಲ್ಲಿಸಿರುವುದು ಅವರ ಕರ್ತವ್ಯಲೋಪವನ್ನು ತೋರಿಸುತ್ತದೆ.

ಇ) ದೂರುದಾರರು ಸಾರ್ವಜನಿಕ ವ್ಯಕ್ತಿಯಾಗಿದ್ದು ಇಂತಹ ಸಮಸ್ಯೆಗಳು ಉದ್ಭವವಾದಾಗ ಸಂಬಂಧಿತ ಇಲಾಖೆಗಳಿಂದ ಮೊಜಿಣಿ ಕೈಗೊಂಡು, ಆ ಪ್ರಕಾರ ದಾಖಲಾತಿಗಳನ್ನು ಪಡೆದು ಅದರ ಮೇರೆಗೆ ದೂರುದಾರರಿಗೆ ಪರಿಹಾರ ನೀಡುವುದನ್ನು ಬಿಟ್ಟು ಜವಾಬ್ದಾರಿಯಿಂದ ನುಣಿಚಿಕೊಳ್ಳಲು ದೂರುದಾರರೇ ದಾಖಲೆಗಳನ್ನು ನೀಡಿದಾಗ ಮಾತ್ರ ಕ್ರಮ ಕೈಗೊಳ್ಳುವುದಾಗಿ ಹೇಳಿದ್ದು ಒಪ್ಪುವಂತಹದಲ್ಲ. ಆದ್ದರಿಂದ ಎದುರುದಾರರು ದೂರುದಾರರ ಸಮಸ್ಯೆಗೆ ಪ್ರಮಾಣಿಕವಾಗಿ ಪ್ರಯತ್ನಿಸದೆ ಹಾಗೂ ಅವರಿಗೆ ಪರಿಹಾರ ಒದಗಿಸಿಕೊಡದೆ ಕರ್ತವ್ಯದಲ್ಲಿ ನಿರ್ಲಕ್ಷ್ಯ ತೋರಿದ್ದಾರೆಂದು ಮೇಲ್ನೋಟಕ್ಕೆ ಕಂಡುಬರುತ್ತದೆ.

7. ಮೇಲ್ಕಂಡ ಅಂಶಗಳು, ಕಡತದ ಸಂಗತಿಗಳು ಹಾಗೂ ದಾಖಲಾತಿಗಳನ್ನು ಮತ್ತು ಎದುರುದಾರರು ನೀಡಿರುವ ಉತ್ತರಗಳನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, ಸದರಿ ಎದುರುದಾರರು ತಮ್ಮ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ಸಮಂಜಸ/ಸಮಾಧಾನಕರ ಕಾರಣ ತೋರಿಸಿಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿದೆ.

8. ಕಡತದಲ್ಲಿಯ ಸಂಗತಿಗಳು ಹಾಗೂ ದಾಖಲಾತಿಗಳಿಂದ, ಎದುರುದಾರರು ಸರ್ಕಾರಿ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡ ದುರ್ವರ್ತನೆ/ ದುರ್ನಡತೆ ಮೇಲ್ನೋಟಕ್ಕೆ ಕಂಡು ಬರುತ್ತದೆ.

9. 1 ಮತ್ತು 2ನೇ ಎದುರುದಾರರು ಸಾರ್ವಜನಿಕ/ ಸರ್ಕಾರಿ ನೌಕರರಾಗಿದ್ದು, ತಮ್ಮ ಕರ್ತವ್ಯ ಪರಿಪಾಲನೆಯಲ್ಲಿ ನಿಷ್ಠೆಯನ್ನು ತೋರದೆ ಕರ್ತವ್ಯ ಲೋಪವೆಸಗಿ, ಸಾರ್ವಜನಿಕ/ ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ಮೇಲ್ನೋಟಕ್ಕೆ ಕಂಡುಬರುತ್ತಿರುವುದರಿಂದ, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966 ನಿಯಮ 3(1) (i) ಮತ್ತು (ii) ರನ್ವಯ ದುರ್ನಡತೆಯೆಸಗಿದ್ದು, ಶಿಸ್ತು ಕ್ರಮಕ್ಕೆ ಭಾದ್ಯರಾಗಿರುವುದು ಕಂಡು ಬಂದಿರುವುದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(3) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, 1 ಮತ್ತು 2ನೇ ಎದುರುದಾರರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು ಹಾಗೂ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 14–ಎ ರಡಿಯಲ್ಲಿ 1 ಮತ್ತು 2ನೇ ಎದುರುದಾರರ ವಿರುದ್ಧ ಇಲಾಖಾ ವಿಚಾರಣೆಯನ್ನು ಈ ಪ್ರಾಧಿಕಾರಕ್ಕೆ ವಹಿಸ ಬೇಕೆಂದೂ ಕೋರಿದೆ.

10. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಮೂರು ತಿಂಗಳೊಳಗೆ ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

-14/10/16.

[ ನ್ಯಾಯಮೂರ್ತಿ ಸುಭಾಷ್ ಬಿ ಅಡಿ]

ಉಪಲೋಕಾಯುಕ್ತರು,

ಕರ್ನಾಟಕ ರಾಜ್ಯ.